



# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ



**ಈಶ್ವರಪ್ಪ**

ಪಕ್ಷೇತರ ಅಭ್ಯರ್ಥಿ ಕೆ.ಎಸ್.ಈಶ್ವರಪ್ಪ ಶಿಕಾರಿಪುರದಲ್ಲಿ ಚುನಾವಣೆ ಕಚೇರಿ ಉದ್ಘಾಟಿಸಿದರು.



ಶನಿವಾರ,20ನೇ ಏಪ್ರಿಲ್,2024 | ● ಸಂಪುಟ-1 | ● ಸಂಚಿಕೆ-60 | ● ಉಚಿತ | ● | ● www.suddisanchaari.in





**Top News** ಸಚಿವ ಮಧು ಬಂಗಾರಪ್ಪ ವಿರುದ್ಧ ಮಹೇಶ್ ಹುಲ್ಮಾರ ವಾಗ್ದಾಳಿ

## ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರವಾಗಿ ಕೆಲಸ ಮಾಡಿದ್ದಕ್ಕೆ ಸೇಡು

ಸುದ್ದಿ-ಸಂಚಾರಿ
ಶಿಕಾರಿಪುರ :
ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಪರವಾಗಿ ನಾವು ಕೆಲಸ ಮಾಡದೆ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರವಾಗಿ ಮತಯಾಚನೆ ಮಾಡಿದ್ದಕ್ಕಾಗಿ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ನಮ್ಮ ಮೇಲೆ ಹಗೆ ತೀರಿಸಿಕೊಳ್ಳುತ್ತಿದ್ದಾರೆ ಎಂದು ಪುರಸಭಾ ಸದಸ್ಯ ಹಾಗೂ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮಹೇಶ್ ಹುಲ್ಮಾರ್ ಹೇಳಿದರು.

ಅವರು ಪಟ್ಟಣದ ಸುದ್ದಿ ಮನೆಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ನಾವು ಮೂರು ದಶಕಗಳಿಂದಲೂ ಕಾಂಗ್ರೆಸ್ ಅನ್ನು ಕಟ್ಟಿದ್ದೇವೆ ಮೂರು ಬಾರಿ ಪುರಸಭಾ ಸದಸ್ಯನಾಗಿದ್ದೇನೆ. ಎನ್‌ಎಸ್ ಯುಐ ,ಯುವ ಕಾಂಗ್ರೆಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ವರೆಗೂ ಜನರು ನಮ್ಮನ್ನು ಆಶೀರ್ವದಿಸಿ ಹರಿಸಿದ್ದಾರೆ , ಆದರೆ ಪಕ್ಷದಿಂದ ಪಕ್ಷಕ್ಕೆ ಬಂದ ಪಕ್ಷೇತರ ಅಭ್ಯರ್ಥಿ ನಾಗರಾಜ್ ಗೌಡ ಪರವಾಗಿ ಮಧು ಬಂಗಾರಪ್ಪನವರು ಚುನಾವಣೆಗೆ ಹಣವನ್ನು ಒದಗಿಸಿ, ಅವರ ಪರವಾಗಿ ಚುನಾವಣೆ ನಡೆಸುವಂತೆ ಕಾಂಗ್ರೆಸ್ ಪಕ್ಷದವರಿಗೆ ತಿಳಿಸಿದರು. ಇದು ಪಕ್ಷದ್ರೋಹ ಅಲ್ಲವೇ.

ಪಕ್ಷವು ಗೋಣಿ ಮಾಲತೇಶ್ ಅವರಿಗೆ ಬಿ ಫಾರ್ಮನ್ನು ನೀಡಿದ್ದ ಕಾರಣಕ್ಕಾಗಿ ನಾನು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿ ಶಿಸ್ತಿನ ಸಿಪಾಯಿಯಂತೆ ಪಕ್ಷದ ಪರವಾಗಿ ಚುನಾವಣೆ ಎದುರಿಸಿದ್ದೇವೆ.
ಇವರಿಗೆ ತಾಕತ್ ಇದ್ದಿದ್ದರೆ ನೇರವಾಗಿ ನಾಗರಾಜ್ ಗೌಡ ಅವರಿಗೆ ಬಿ ಫಾರಂ ಕೊಡಿಸಿ ಚುನಾವಣೆಯನ್ನು ಎದುರಿಸುವಂತೆ ನಮಗೆ ಹೇಳಿದ್ದರೆ. ಪಕ್ಷದ ನಿಷ್ಠಾವಂತರಾಗಿ ನಾಗರಾಜ್ ಗೌಡರಿಗೆ ಮತವನ್ನು ಕೇಳುತ್ತಿದ್ದೆವು, ಒಳಗೊಂದು ಹೊರಗೊಂದು ಮಾಡುವ ಇಬ್ಬದಿಯ ನೀತಿ ಪಕ್ಷದ್ರೋಹವನ್ನು ಎಂದು ಸಹಿಸಲಾಗದು ಎಂದರು .

ರಾಜ್ಯದಲ್ಲಿ ಡಾ. ರಾಜಕುಮಾರ್ ಅವರ ಕುಟುಂಬಕ್ಕೆ ತನ್ನದೇ ಆದ ಗೌರವ ಸ್ಥಾನಮಾನವೂ ಇದೆ, ಅಂತ ಕುಟುಂಬದ ಸೊಸೆಯನ್ನು ಗೀತಕ್ಕನನ್ನು ಮಧು ಬಂಗಾರಪ್ಪ ಈ ಬಿಸಿಲಿನಲ್ಲಿ ಬೀದಿ ಬೀದಿ ತಿರುಗಿಸುತ್ತಿದ್ದಾರೆ, ಇದರ ಬದಲಾಗಿ ಚುನಾವಣೆಯನ್ನು ಗೆಲ್ಲಲೇ ಬೇಕೆಂಬ ಹಟವಿದ್ದಿದ್ದರೆ ತಾವೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಚುನಾವಣೆಯನ್ನು ಎದುರಿಸಬೇಕಿತ್ತು. ಆದರೆ ಈಗ ಇವರು ಮಾಡುತ್ತಿರುವುದಾದರೂ ಏನು.

ಈಗ ಗೀತಾ ಶಿವರಾಜ್ ಕುಮಾರ್ ಅವರು ಸೋಲುವುದು ಖಚಿತವಾಗಿದ್ದು. ಅವರ ಸೋಲಿಗೆ ನೇರವಾಗಿ ಮಧು ಬಂಗಾರಪ್ಪನವರೇ ಕಾರಣ ಅದರ ಹೊಣೆ ಹೊತ್ತು ಅವರು ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಬೇಕು ಎಂದರು. ತೀರ್ಥಹಳ್ಳಿಯ ಶಾಸಕರಾಗಿದ್ದ ಮಾಜಿ ಸಚಿವರು ಆದ ಕಿಮ್ಮನೆ ರತ್ನಾಕರ್ ಅವರು ಹಿರಿಯರಾಗಿದ್ದು ಅವರು ಚುನಾವಣೆಯಲ್ಲಿ ಗೆದ್ದರೆ ಮುಂದಿನ ದಿನದಲ್ಲಿ ನನಗೆ ಜಿಲ್ಲೆಯಲ್ಲಿ ಸಚಿವ ಸ್ಥಾನ ದೊರಕುವುದಿಲ್ಲ ಎಂಬ ದುರಲೋಚನೆಯಿಂದ ಅವರ ಸೋಲಿಗೂ ಮಧು ಬಂಗಾರಪ್ಪನವರು ಕಾರಣರಾಗಿದ್ದಾರೆ ಎಂದರು. ಸ್ವತಃ ಸ್ವಂತ ಅಣ್ಣನನ್ನೇ ಬಿಡದ ಇವರು ಪಕ್ಷದಲ್ಲಿ ನಮ್ಮಂತ ಸಾಮಾನ್ಯರನ್ನು ಬಿಡುತ್ತಾರೆ ಎಂದರು.

ಕಾಂಗ್ರೆಸ್ ಪಕ್ಷವನ್ನು ನಾವು ಹುತ್ತದಂತೆ ಶ್ರಮವಹಿಸಿ ಕಟ್ಟಿದ್ದೇವೆ ಆದರೆ ಆ ಹುತ್ತಕ್ಕೆ ನಾಗರಹಾವಿನಂತೆ ಬಂದು ಸೇರಿಕೊಂಡಿರುವ ನಾಗರಾಜ್ ಗೌಡ ಪಕ್ಷದಲ್ಲಿರುವ ಎಲ್ಲರನ್ನೂ ಹುಡುಕಿ ಹೊರಹಾಕುತ್ತಿದ್ದಾರೆ. ಇದರಿಂದ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಬೀದಿಗೆ ಬರುವ ಪರಿಸ್ಥಿತಿ ಉಂಟಾಗಿದೆ ಎಂದರು. ರಾಜ್ಯದಲ್ಲಿ ಬಿ.ಎಸ್ ಯಡಿಯೂರಪ್ಪ ಹಾಗೂ ಜಿಲ್ಲೆಯಲ್ಲಿ ಬಿ.ವೈ ರಾಘವೇಂದ್ರ ಅವರ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಭವಿಷ್ಯದಲ್ಲಿ ಉತ್ತಮ ಕಾರ್ಯಗಳನ್ನು ಬಿಜೆಪಿಯಿಂದ ಮಾತ್ರ ಮಾಡಲು ಸಾಧ್ಯ ಎಂಬ ಸದುದ್ದೇಶದಿಂದ , ಬೇಷರತ್ತಾಗಿ ಬಿಜೆಪಿ ಪಕ್ಷವನ್ನು ಸೇರಿದ್ದೇನೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಮಾಜಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ ಬಿ ಚನ್ನವೀರಪ್ಪ, ಬಿಜೆಪಿ ನಗರ ಅಧ್ಯಕ್ಷ ಎಸ್ ಎಸ್ ರಾಘವೇಂದ್ರ , ಮಿಲಿಟರಿ ಬಸವರಾಜ್, ಜಿನಳ್ಳಿ ಪ್ರಶಾಂತ್, ರವಿಕುಮಾರ್, ಪುಟ್ಟಪ್ಪ, ಡಿ ಎಲ್ ಬಸವರಾಜು , ಹಳ್ಳೂರು ಪರಮೇಶ್ವರಪ್ಪ, ಬೆಣ್ಣೆ ಪ್ರವೀಣ್, ರೇಣುಕಾ ಸ್ವಾಮಿ, ಸಂದೀಪ್ ಗೋಣಿ, ಭೋಗಿ ಚೇತನ್ ಮುಂತಾದವರು ಪಾಲ್ಗೊಂಡಿದ್ದರು.


ಆಧಾರ್ ಕಾರ್ಡ ತಿದ್ದುಪಡಿ ಮಾಡಲಾಗುವುದು

1.ಮೊಬೈಲ್ ನಂಬರ್.
2.ವಿಳಾಸ ಬದಲಾವಣೆ
3.ತಂದೆ/ಪತಿಯ ಹೆಸರು
ತಿದ್ದುಪಡಿ ಮಾಡಲಾಗುವುದು

ಬಸ್ ನಿಲ್ದಾಣ
ಶಿರಾಳಕೊಪ್ಪ








# ಶಿಕಾರಿಪುರ : ಕುಮದ್ವತಿ ಕೇಂದ್ರಿಯ ವಸತಿ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪ್ರಾರಂಭ

ಸುದ್ದಿಸಂಚಾರಿ



**ಶಿಕಾರಿಪುರ** ಪಕ್ಷೇತರ ಅಭ್ಯರ್ಥಿ ಕೆ.ಎಸ್.ಈಶ್ವರಪ್ಪ ಶುಕ್ರವಾರ ಪಟ್ಟಣದಲ್ಲಿ ಚುನಾವಣಾ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದರು.

## ಅಂತಿಮ ದಿನ 14 ನಾಮಪತ್ರ

ಸುದ್ದಿ-ಸಂಚಾರಿ | ಶಿವಮೊಗ್ಗ

ಶಿವಮೊಗ್ಗ: ಶಿವಮೊಗ್ಗ ಲೋಕಸಭಾ ಮತಕ್ಷೇತ್ರದಲ್ಲಿ ಏ.19 ರಂದು ಒಟ್ಟು 14 ನಾಮಪತ್ರಗಳು ಸಲ್ಲಿಕೆ ಆಗಿವೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೀತಾ ಶಿವರಾಜಕುಮಾರ್, ಅಖಿಲ ಭಾರತ ಹಿಂದೂ ಮಹಾಸಭಾ ಪಕ್ಷದ ಅಭ್ಯರ್ಥಿ ಚಂದ್ರಶೇಖರ್ ಎಚ್.ಸಿ, ಪಕ್ಷೇತರ ಅಭ್ಯರ್ಥಿಗಳಾಗಿ ಕೆ.ಎಸ್.ಈಶ್ವರಪ್ಪ, ಡಿ.ಎಸ್.ಈಶ್ವರಪ್ಪ, ಪಿ.ಶ್ರೀಪತಿ, ಎಸ್.ಬಾಲಕೃಷ್ಣ ಭಟ್, ರವಿಕುಮಾರ್ ಎನ್, ಪೂಜಾ ಅಣ್ಣಯ್ಯ, ಇಮ್ತಿಯಾಜ್ ಎ.ಅತ್ತಾರ್, ಸಂದೇಶ್ ಶೆಟ್ಟಿ ಎ, ವೈ.ಆರ್. ಬಂಡಿ ರಂಗನಾಥ, ಶೇಖರಪ್ಪ, ಎಚ್. ಹನುಮಂತಪ್ಪ, ಜಿ.ಜಯದೇವ ಸೇರಿದಂತೆ ಒಟ್ಟು 14 ನಾಮಪತ್ರಗಳು ಶುಕ್ರವಾರ ಸಲ್ಲಿಕೆಯಾಗಿವೆ.

ಒಟ್ಟು 38 ನಾಮಪತ್ರ: ಏ.12 ರಿಂದ 19ರವರೆಗೆ ಒಟ್ಟು 27 ಅಭ್ಯರ್ಥಿಗಳಿಂದ 38 ನಾಮಪತ್ರ ಸಲ್ಲಿಕೆಯಾಗಿವೆ. ಏ.20 ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಏ.22 ರಂದು ಉಮೇದುವಾರಿಕೆ ಹಿಂಪಡೆಯಲು ಕಡೆಯ ದಿನ. ಮೇ 7 ರಂದು ಮತದಾನ ಜರುಗಲಿದೆ.

**Top News** ಶಿಕಾರಿಪುರದಲ್ಲಿ ಚುನಾವಣಾ ಕಚೇರಿ ಉದ್ಘಾಟನೆ.

# ರಾಜ್ಯದಲ್ಲಿ ಹಿಂದೂಗಳಿಗೆ ಅನ್ಯಾಯವಾಗುತ್ತಿದೆ:ಈಶ್ವರಪ್ಪ

ಸುದ್ದಿ-ಸಂಚಾರಿ
ಶಿಕಾರಿಪುರ:

'ರಾಜ್ಯದಲ್ಲಿ ಹಿಂದೂಗಳಿಗೆ ಅನ್ಯಾಯವಾಗುತ್ತಿದೆ. ಮುಸ್ಲಿಂ ಗೂಂಡಾ ಒಬ್ಬನು ಹಿಂದೂ ಯುವತಿಯ ಕೊಲೆ ಮಾಡಿದ್ದಾನೆ. ಇಷ್ಟಾದರೂ ರಾಜ್ಯ ಸರ್ಕಾರ ಬದುಕಿದೆಯೋ ಸತ್ತಿದೆಯೋ ಗೊತ್ತಾಗುತ್ತಿಲ್ಲ. ಕೊಲೆ ಆರೋಪಿ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಪಕ್ಷೇತರ ಅಭ್ಯರ್ಥಿ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದರು.

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಶುಕ್ರವಾರ ಚುನಾವಣಾ ಪ್ರಚಾರ ಕಚೇರಿ ಉದ್ಘಾಟಿಸಿ ಅವರು ಮಾತನಾಡಿದರು.

'ಬಿಜೆಪಿಯಲ್ಲಿ ಸಾಮೂಹಿಕ ನಾಯಕತ್ವ ಇಲ್ಲದಂತಾಗಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಅವರ ಮಕ್ಕಳ ಕೈಯಲ್ಲಿ ಪಕ್ಷ ಇದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಆರು ತಿಂಗಳು ಖಾಲಿ ಇದ್ದರೂ, ಹಟ ಮಾಡಿ ಮಗನಿಗೆ ಯಡಿಯೂರಪ್ಪ ಹುದ್ದೆ ಕೊಡಿಸಿದ್ದಾರೆ. ಸಿ.ಟಿ.ರವಿ, ಬಸನಗೌಡ ಪಾಟೀಲ ಯತ್ನಾಳ್, ಪ್ರತಾಪ್ ಸಿಂಹ ಹಾಗೂ ನಾನು ಹಿಂದುತ್ವದ ಪರ ಧ್ವನಿ ಎತ್ತುತ್ತಿದ್ದೇವೆ' ಎಂದರು.

'ನನ್ನನ್ನು ನಕಲಿ ಹಿಂದುತ್ವವಾದಿ ಎಂದು ಟೀಕಿಸುವ ಅರ್ಹತೆ ವಿಜಯೇಂದ್ರಗೆ ಇಲ್ಲ. ಆತ ರಾಜಕಾರಣದಲ್ಲಿ ಇನ್ನೂ ಎಳಸು, ಇನ್ನೂ ಕಣ್ಣೇ ಬಿಟ್ಟಿಲ್ಲ. ಯಡಿಯೂರಪ್ಪ ಪುತ್ರ ಎನ್ನುವುದೇ ಆತನ ಸಾಧನೆ' ಎಂದು ಲೇವಡಿ ಮಾಡಿದರು.

'ಭಾರತಿ ಶೆಟ್ಟಿ, ಶೋಭಾ ಕರಂದ್ಲಾಜೆ ಸೇರಿದಂತೆ ತಮಗೆ ಬೇಕಾದ ಮಹಿಳೆಯರಿಗೆ ಮಾತ್ರ ಟಿಕೆಟ್ ಹಾಗೂ ಸ್ಥಾನಮಾನ ನೀಡಿದ್ದಾರೆ. ಪಕ್ಷಕ್ಕಾಗಿ ದುಡಿದ ಹಲವು ಮಹಿಳೆಯರನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಮಹಿಳೆಯರ ಶಾಪ ಅವರಿಗೆ ತಟ್ಟುತ್ತದೆ. ನಾನು ಲಿಂಗಾಯತ, ಈಡಿಗ ಸೇರಿದಂತೆ ಯಾವುದೇ ಜಾತಿ ಆಧಾರದ ಮೇಲೆ ಚುನಾವಣೆ ಮಾಡುವುದಿಲ್ಲ. ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ನಿರೀಕ್ಷೆ ಮೀರಿ 35,000 ಜನ ಸೇರಿದ್ದರು. ನಾನು ಚುನಾವಣಾ ಕಣದಿಂದ ಹಿಂದೆ ಸರಿಯುವುದಿಲ್ಲ. ಎಲ್ಲ ವರ್ಗದ ಜನರ ಸಹಕಾರದಿಂದ 1 ಲಕ್ಷ ಮತಗಳ ಅಂತರದಲ್ಲಿ ಗೆಲ್ಲುತ್ತೇನೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ತಾಲ್ಲೂಕಿನಲ್ಲಿ ಯಡಿಯೂರಪ್ಪ ಹಾಗೂ ಅವರ ಮಕ್ಕಳು ಹೊಂದಾಣಿಕೆ ರಾಜಕಾರಣ ಮಾಡುತ್ತಾ ಗೆಲುವು ಸಾಧಿಸಿದ್ದಾರೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಪುತ್ರ ವಿಜಯೇಂದ್ರನನ್ನು ಗೆಲ್ಲಿಸಲು ಕಾಂಗ್ರೆಸ್ ಜತೆ ಹೊಂದಾಣಿಕೆ ಮಾಡಿಕೊಂಡಿದ್ದರು. ಸಾಧು ವೀರಶೈವ ಸಮಾಜದ ಯುವಕ ನಾಗರಾಜಗೌಡ ಹಾಗೂ ಹಿಂದುಳಿದ ವರ್ಗದ ಗೋಣಿ ಮಾಲತೇಶ್ ಅವರಿಗೆ ಅನ್ಯಾಯ ಮಾಡಿದ್ದಾರೆ. ಕಾಂಗ್ರೆಸ್ ಜತೆ ಹೊಂದಾಣಿಕೆ ಪರಿಣಾಮ ತಾಲ್ಲೂಕಿನಲ್ಲಿ ಬಿಜೆಪಿ ಲೀಡ್ 10 ಸಾವಿರಕ್ಕೆ ಕುಸಿದಿದೆ' ಎಂದರು.

'ಪ್ರಚಾರ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ್ ತಮ್ಮ ಹಣೆಗೆ ಹಚ್ಚಿದ ಕುಂಕುಮ ಅಳಿಸಿದ್ದಾರೆ. ಅವರು ರಾಜ್ಯದ ಹಿಂದೂಗಳ ಕ್ಷಮೆ ಕೇಳಬೇಕು' ಎಂದು ಒತ್ತಾಯಿಸಿದರು.

ಮಾಜಿ ಸಚಿವ ಗೂಳಿಹಟ್ಟಿ ಶೇಖರ್, ಮುಖಂಡರಾದ ಸಾಗರ ಮಂಜುನಾಥ್, ರಾಗಿಕೊಪ್ಪ ಗಂಗ್ಯಾನಾಯ್ಕ, ಶಿವಮೊಗ್ಗ ಮೋಹನ್, ಮುರುಗೇಶ್, ನಗರದ ಅಶೋಕ್, ಗೊದ್ದನಕೊಪ್ಪ ಕುಮಾರನಾಯ್ಕ, ತಿಮ್ಲಾಪುರ ಹುಚ್ರಾಯಪ್ಪ, ಮಂಜ್ಯಾನಾಯ್ಕ ಗೊಗ್ಗ ಉಪಸ್ಥಿತರಿದ್ದರು.

## ನೇಹ ಹಿರೇಮಠ ಹತ್ಯ ಖಂಡನೆ



ಸುದ್ದಿ-ಸಂಚಾರಿ
ತೊಗರ್ಸಿ

ಹುಬ್ಬಳಿಯಲ್ಲಿ ಹತ್ಯೆಯಾದ ನೇಹ ನಿರಂಜನಯ್ಯ ಹಿರೇಮಠ ಅವರ ಕೊಲೆಯ ಹೇಯ ಕೃತ್ಯವನ್ನು ಶಿವಮೊಗ್ಗ ಜಿಲ್ಲಾ ವೀರಶೈವ ಲಿಂಗಾಯತ ಮಠಾಧೀಶರ ಪರಿಷತ್ ಖಂಡಿಸುತ್ತದೆ ಎಂದು ತೊಗರ್ಸಿ ಮಳೆಮಠದ ಮಹಾಂತದೇಶಿ ಕೇಂದ್ರ ಸ್ವಾಮಿಜಿ ತಿಳಿಸಿದ್ದಾರೆ.

ಹತ್ಯೆ ಖಂಡಿಸಿ ನಾಡಿನಾದ್ಯಂತ ಪ್ರತಿಭಟನೆ ಮಾಡುತ್ತಿರುವ ಪೂಜ್ಯ ಮಠಾಧೀಶರು, ಮಹಿಳಾ ಸಂಘಟನೆಗಳು , ವಿಶ್ವ ಹಿಂದೂ ಪರಿಷತ್ ಎಲ್ಲಾ ಸಂಘ ಸಂಸ್ಥೆಗಳಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಅವರು ಘೋಷಣೆ ಮಾಡಿದ್ದಾರೆ

## ರೂಪಕಲಾ ಎಸ್ ಹೆಗ್ಡೆ ಆಯ್ಕೆ



ಸುದ್ದಿ-ಸಂಚಾರಿ
ಶಿಕಾರಿಪುರ:

ಪುರಸಭೆಯ ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು ಆದ ಶ್ರೀಮತಿ ರೂಪಕಲಾ ಎಸ್ ಹೆಗಡೆ ಅವರನ್ನು ನಗರದ ಬಿಜೆಪಿ ಮಹಿಳಾ ಶಕ್ತಿ ಕೇಂದ್ರದ ನೂತನ ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ. ಪುರಸಭಾ ಅಧ್ಯಕ್ಷರಾಗಿ ನೀಡಿದ ಉತ್ತಮ ಸೇವೆಯನ್ನು ಗುರುತಿಸಿ ಈ ಹುದ್ದೆ ನೀಡಿದ್ದು, ಅವಕಾಶ ಮಾಡಿಕೊಟ್ಟ ಪಕ್ಷದ ಪ್ರತಿಯೊಬ್ಬರಿಗೂ ಅಭಿನಂದನೆಗಳನ್ನು ತಿಳಿಸಿರುತ್ತಾರೆ.

ಸುದ್ದಿ-ಸಂಚಾರಿ



# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ


**ರೂಪಕಲಾ ಹೆಗ್ಡೆ ಆಯ್ಕೆ**

ಶಿಕಾರಿಪುರ ನಗರದ ಬಿಜೆಪಿ ಮಹಿಳಾ ಶಕ್ತಿ ಕೇಂದ್ರದ ನೂತನ ಅಧ್ಯಕ್ಷರಾಗಿ ಆಯ್ಕೆ

ಶನಿವಾರ,20ನೇ ಏಪ್ರಿಲ್,2024 | ● ಸಂಪುಟ-1 | ● ಸಂಚಿಕೆ-60 | ● ಉಚಿತ | ● | ● www.suddisanchaari.in




**Top News** ರಾಜ್ಯಮಟ್ಟದಲ್ಲಿ 2ನೇ ರ‍್ಯಾಂಕ್ ಪಡೆದ ಪವನ್ ಗೆ ಸನ್ಮಾನ

## ವಿದ್ಯೆಯು ಸಾಧಕನ ಸ್ವತ್ತೆ ಹೊರತು ಸೋಮಾರಿಯ ಸ್ವತ್ತಲ್ಲ : ಲಕ್ಷ್ಮಣ್

ಸುದ್ದಿ-ಸಂಚಾರಿ
ಶಿಕಾರಿಪುರ :
ವಿದ್ಯೆಯು ಸಾಧಕನ ಸ್ವತ್ತೆ ಹೊರತು ಸೋಮಾರಿಯ ಸ್ವತ್ತಲ್ಲ ಎಂದು ತಾಲೂಕು ನಾಮದೇವ ಸಿಂಪಿ ಕ್ಷೇಮಾಭಿವೃದ್ಧಿ ಸಂಘದ ಮುಖಂಡರಾದ ಕೆ. ಹೆಚ್. ಲಕ್ಷ್ಮಣ ಹೇಳಿದರು.

ಅವರು ಪಟ್ಟಣದ ಪಿ ಯು ಸಿ ಯ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ ಎರಡನೇ ರಾಂಕ್ ಪಡೆದ ಪವನ್ ಶಿಗ್ಗಾವ್ಕರ್ ಅವರಿಗೆ ಅಭಿನಂದನೆ ಸಲ್ಲಿಸಿ ಮಾತನಾಡುತ್ತಿದ್ದರು. ಜಗತ್ತಿನ ವೇಗ ಇಂದು ಹೆಚ್ಚಾಗಿದ್ದು ನಾವು ಶೈಕ್ಷಣಿಕವಾಗಿ ಪ್ರಗತಿ ಸಾಧಿಸದಿದ್ದರೆ, ಬದಲಾಗುತ್ತಿರುವ ಜಗತ್ತಿನ ವೇಗದ ಜೊತೆಗೆ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ, ಹಾಗಾಗಿ ಸಮಾಜದ ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಬೇಕು ಎಂದರು.

ಪವನ್ ಈ ನಿಟ್ಟಿನಲ್ಲಿ ಮಾದರಿಯಾಗಿದ್ದು , ಕಾಮರ್ಸ್ ವಿಭಾಗದಲ್ಲಿ 596 ಅಂಕ ಗಳಿಸಿ ರಾಜ್ಯಕ್ಕೆ ಎರಡನೇ ರಾಂಕ್ ಪಡೆದಿದ್ದು . ಶಿಕಾರಿಪುರದ ಕುಮದ್ವತಿ ಕಾಂಪೊಸಿಟ್ ಪಿಯು ಕಾಲೇಜು ವಿದ್ಯಾರ್ಥಿ , ಇವರ ತಂದೆ ಎಸ್.ಮಂಜುನಾಥ್ ಕುಮದ್ವತಿ ಬಿ.ಇಡ್ ಕಾಲೇಜಿನಲ್ಲಿ ಎಫ್‌ಡಿಎ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಾಯಿ ಅನಿತಾ ಗೃಹಿಣಿ ಆಗಿದ್ದು ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದರು.

ಶಿಕ್ಷಣದಿಂದ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯವಾಗುತ್ತದೆ , ಈ ನಿಟ್ಟಿನಲ್ಲಿ ಸರ್ಕಾರವು ಹಲವಾರು ಯೋಜನೆಗಳನ್ನು ಜಾರಿಗೆಗೊಳಿಸಿ ಸಮಾಜದ ಪ್ರತಿಯೊಬ್ಬ ಕಡುಬಡವನು ಶಿಕ್ಷಣದಿಂದ ವಂಚಿತನಾಗಬಾರದು ಎಂಬ ಸದುದ್ದೇಶವನ್ನು ಇಟ್ಟುಕೊಂಡು ಶೈಕ್ಷಣಿಕ ಕ್ರಾಂತಿಯನ್ನು ನಡೆಸಿದೆ , ಇದರ ಪ್ರಯೋಜನವನ್ನು ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮ ದಲ್ಲಿ ಪ್ರಜ್ವಲ್ ಫ್ಯಾಷನ್,ಮದುಕೇಶ್ವರ ಮಾನಸ ಟ್ರೇಡರ್ಸ್, ರಾಘವೇಂದ್ರ ಖಾಟವ್ಕರ್ ಪ್ರವೀಣ್ ಎನ್ ಡಿ, ಶ್ರೀನಿವಾಸ್ ಮತ್ತು ರಾಜೀವ್ ಪೆಟ್ಕರ್,ರಾಜು ದಾವಣಗೆರೆ ಕ್ಲಾಥ್ ಎಮ್ಪೋರಿಯಂ,ನಾಗರಾಜ್ ನಿಶಾ ಫ್ಯಾಷನ್ಸ್ ಸಂತೋಷ್ ಪೇಟ್ಕರ್ , ನಾಗರಾಜ್ ಶಿಕ್ಷಕರು ಪವನ್ ಹಾಗೂ ಆರ್‌ಪಿ ಜಯಪ್ಪ. ಇವರುಗಳು ಉಪಸ್ಥಿತರಿದ್ದು.




**Top News** ನವದೆಹಲಿ,ಮುಂಬೈ ನಲ್ಲಿ ಸಹ ಸಿದ್ಧತೆ

## ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ಏರ್‌ಟ್ಯಾಕ್ಸಿ ಸೇವೆಗೆ ಆರಂಭಿಸಲು ಸಿದ್ಧತೆ

ನವದೆಹಲಿ (ಪಿಟಿಐ):
ದೇಶದಲ್ಲಿ 2026ರ ವೇಳೆಗೆ ಎಲೆಕ್ಟ್ರಿಕ್ ಏರ್ ಟ್ಯಾಕ್ಸಿ ಸೇವೆ ಆರಂಭಿಸಲು ಇಂಡಿಗೊ ಕಂಪನಿಯ ಮಾತೃಸಂಸ್ಥೆಯಾದ ಇಂಟರ್‌ಗ್ಲೋಬಲ್ ಎಂಟರ್‌ಪ್ರೈಸಸ್ ಮತ್ತು ಅಮೆರಿಕದ ಆರ್ಚರ್ ಏವಿಯೇಷನ್ ಜಂಟಿಯಾಗಿ ಸಿದ್ಧತೆ ನಡೆಸಿವೆ.

ಪ್ರಥಮ ಬಾರಿಗೆ ನವದೆಹಲಿಯ ಕನೌಟ್ ಸ್ಥಳದಿಂದ ಹರಿಯಾಣದ ಗುರುಗ್ರಾಮಕ್ಕೆ ಈ ಸೇವೆ ಆರಂಭವಾಗಲಿದೆ. ಏಳು ನಿಮಿಷಗಳಲ್ಲಿ ಪ್ರಯಾಣಿಕರನ್ನು ತಲುಪಿಸಲಾಗುತ್ತದೆ ಎಂದು ಕಂಪನಿ ತಿಳಿಸಿದೆ.

ನವದೆಹಲಿ ಬಳಿಕ ಮುಂಬೈ ಮತ್ತು ಬೆಂಗಳೂರಿನಲ್ಲಿಯೂ ಈ ಸೇವೆ ವಿಸ್ತರಿಸಲು ಈ ಕಂಪನಿಗಳು ನಿರ್ಧರಿಸಿವೆ.

‘ಎಲೆಕ್ಟ್ರಿಕ್ ಏರ್ ಟ್ಯಾಕ್ಸಿ ಸೇವೆ ಕುರಿತು ಅಮೆರಿಕದ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (ಎಫ್‌ಎಎ) ಜೊತೆಗೆ ಮಾತುಕತೆ ನಡೆಯುತ್ತಿದೆ. ಏರ್‌ಕ್ರಾಫ್ಟ್‌ಗೆ ಮುಂದಿನ ವರ್ಷ ಅನುಮತಿ ಸಿಗುವ ನಿರೀಕ್ಷೆಯಿದೆ. ಇದಾದ ಬಳಿಕ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯಕ್ಕೆ (ಡಿಜಿಸಿಎ) ಅನುಮತಿ ಕೋರಿ ಅರ್ಜಿ ಸಲ್ಲಿಸಲಾಗುವುದು’ ಎಂದು ಆರ್ಚರ್ ಏವಿಯೇಷನ್ ಸಂಸ್ಥಾಪಕ ಮತ್ತು ಸಿಇಒ ಆಡಮ್ ಗೋಲ್ಡ್‌ಸ್ಟೈನ್ ಅವರು, ಶುಕ್ರವಾರ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಏರ್ ಟ್ಯಾಕ್ಸಿಯಲ್ಲಿ ಕನೌಟ್‌ನಿಂದ ಗುರುಗ್ರಾಮಕ್ಕೆ ತಲುಪಲು ₹2 ಸಾವಿರದಿಂದ ₹3 ಸಾವಿರ ಪ್ರಯಾಣ ವೆಚ್ಚವಾಗಲಿದೆ. ಈ ಎರಡು ಸ್ಥಳಗಳ ನಡುವೆ 27 ಕಿ.ಮೀ. ದೂರವಿದೆ. ರಸ್ತೆ ಮಾರ್ಗದಲ್ಲಿ ಕಾರಿನಲ್ಲಿ ಕ್ರಮಿಸಲು 90 ನಿಮಿಷ ಬೇಕಿದ್ದು, ₹1,500 ವೆಚ್ಚವಾಗಲಿದೆ ಎಂದು ಹೇಳಿದ್ದಾರೆ. ಐದು ಆಸನಗಳ ಸಾಮರ್ಥ್ಯದ 200 ಮಿಡ್‌ನೈಟ್ ಏರ್‌ಕ್ರಾಫ್ಟ್‌ಗಳನ್ನು ಈ ಮಾರ್ಗದಲ್ಲಿ ಕಾರ್ಯಾಚರಣೆಗೆ ಇಳಿಸಲು ನಿರ್ಧರಿಸಲಾಗಿದೆ. ಪೈಲಟ್ ಸೇರಿ ನಾಲ್ವರು ಪ್ರಯಾಣಿಸಲು ಅವಕಾಶ ಸಿಗಲಿದೆ ಎಂದು ತಿಳಿಸಿದ್ದಾರೆ.